ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸಹಕಾರ ಸಂಘಗಳು ಮತ್ತು ಕೆ.ಹೆಚ್.ಡಿ.ಸಿ.ಯಲ್ಲಿ ಮಾರಾಟವಾಗುವ ಬಟ್ಟೆಗಳಿಗೆ ಮಾರ್ಕೆಟಿಂಗ್ ಡೆವಲಪ್‌ಮೆಂಟ್ ಅಸಿಸ್ಟೆನ್ಸ್ ಯೋಜನೆ ಸರ್ಕಾರ ಮುಂದುವರಿಸಿದೆಯೇ?

2) ಹಾಗಿದ್ದಲ್ಲಿ ಶೇಕಡ ಎಷ್ಟು?

3) ಇದರಲ್ಲಿ ರಾಜ್ಯ ಸರ್ಕಾರದ ಪಾಲು ಎಷ್ಟು?

Sri M.MAHADEV (Minister for Sericulture and Textiles):

1) ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಈ ಯೋಜನೆಯನ್ನು ಕೇಂದ್ರ ಸರ್ಕಾರ ಮುಂದುವರಿಸಿಲ್ಲ.

2) ಅನ್ವಯಿಸುವುದಿಲ್ಲ.

3) ಅನ್ವಯಿಸುವುದಿಲ್ಲ.

ವಸತಿ ನಿಲಯದ ಕಟ್ಟಡ.

300(511)

ಶ್ರೀ ಪ್ರಕಾಶ್ ಖಂಡ್ರೆ(ಭಾಲ್ಕಿ): ಮಾನ್ಯ ಸಮಾಜ ಕಲ್ಯಾಣಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣದಲ್ಲಿ ಬಿ.ಸಿ.ಎಂ. ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಸತಿ ನಿಲಯದ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕಟ್ಟಡವನ್ನು ಕಟ್ಟಲು ನಿವೇಶನದ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದರೆ, ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಹೌದು.

ಇ) ಸೂಕ್ತ ನಿವೇಶನವನ್ನು ಪಡೆಯಲು ಕ್ರಮ ವಹಿಸಲಾಗುವುದು.

ಭಾಲ್ಕಿ ಪುರಸಭೆಗೆ ಮಂಜೂರಾದ ಹಣ.

301(512)

ಶ್ರೀ ಪ್ರಕಾಶ್ ಖಂಡ್ರೆ(ಭಾಲ್ಕಿ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಪುರಸಭೆಗೆ ಕಳೆದ ೩ವರ್ಷಗಳಲ್ಲಿ ಹತ್ತನೆ ಹಣಕಾಸು ಆಯೋಗ ಮತ್ತು ಐ.ಡಿ.ಎಸ್.ಎಂ.ಟಿ. ಯೋಜನೆಯಲ್ಲಿ ಮಂಜೂರಾದ ಹಣವೆಷ್ಟು? (ವರ್ಷಾವಾರು ಅಂಕಿ ಅಂಶಗನ್ನು ನೀಡುವುದು)?

ಆ) ಮಂಜೂರಾದ ಹಣದಲ್ಲಿ ಇಲ್ಲಿಯವರೆಗೆ ಖರ್ಚಾದ, ಉಳಿದಿರುವ ಹಣವೆಷ್ಟು; ಉಳಿದ ಹಣ ಖರ್ಚಾಗದಿರಲು ಕಾರಣಗಳೇನು; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಇ) ಭಾಲ್ಕಿ ಪುರಸಭೆಯಲ್ಲಿ ಆಶ್ರಯ ಯೋಜನೆಯ ಮನೆ ಹಂಚಿಕೆಯಲ್ಲಿ ಕಳೆದ ೨ ವರ್ಷಗಳಲ್ಲಿ ಯಾವುದಾದರೂ ಅವ್ಯವಹಾರ ನಡೆದಿದೆಯೇ?

ಈ) ನಡೆದಿದ್ದಲ್ಲಿ ಸರ್ಕಾರ ಈ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದೆ?

ಉ) ಭಾಲ್ಕಿ ಪುರಸಭೆಯಲ್ಲಿ ಬೋಗಸ್ ಹಕ್ಕು ಪತ್ರ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಯಾವ ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ಭಾಲ್ಕಿ ಪಟ್ಟಣಕ್ಕೆ ಐ.ಡಿ.ಎಸ್.ಎಂ.ಟಿ. ಯೋಜನೆಗೆ ಸಂಬಂಧಿಸಿದಂತೆ ಇದುವರೆವಿಗೂ ಕೇಂದ್ರ ಸರ್ಕಾರದಿಂದ ಹಣ ಮಂಜೂರಾಗಿರುವುದಿಲ್ಲ.

ಪುರಸಭೆ ಭಾಲ್ಕಿಗೆ ಹತ್ತನೆ ಹಣಕಾಸು ಯೋಜನೆಯಡಿಯಲ್ಲಿ ಈ ಕೆಳಗಿನಂತೆ ವರ್ಷಾವಾರು ಅನುದಾನ ಬಿಡುಗಡೆ ಮಾಡಲಾಗಿದೆ.